ಆ. ಭೂ ಸ್ವಾಧೀನ ಕ್ರಮಗಳು ಇನ್ನೂ ಸಂಪೂರ್ಣವಾಗಿಲ್ಲದಿರುವುದರಿಂದ ಅಭಿವೃದ್ಧಿ ಕಾರ್ಯವನ್ನು ಕೈಗೊಂಡಿಲ್ಲ.

ಇ. ಉದ್ದೇಶಿತ ಕೈಗಾರಿಕಾ ಬೆಳವಣಿಗೆ ಕೇಂದ್ರದಲ್ಲಿ ಒಟ್ಟು 23 ಎಕರೆ ಜಮೀನನ್ನು ಮಂಜೂರು ಮಾಡಲು ಕೋರಿ 3 ಅರ್ಜಿಗಳು ಬಂದಿರುತ್ತವೆ.

ತುಮಕೂರು ನಗರದಲ್ಲಿ ಒಳಚರಂಡಿ ವ್ಯವಸ್ಥೆಯನ್ನು ಜಾರಿಗೆತರುವ ಬಗ್ಗೆ

2211: ಶ್ರೀ ಎಸ್.ಶಫೀ ಅಹಮ್ಮದ್ (ತುಮಕೂರು):– ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

1.ತುಮಕೂರು ಪಟ್ಟಣ ಜನಸಂಖ್ಯೆಯ 2.5 ಲಕ್ಷ ಮೀರಿರುವುದರಿಂದ ಈ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆಯನ್ನು ಮಾಡುವ ಪ್ರಸ್ತಾವನೆ ಇದೆಯೇ;

2. ನಗರಸಭೆ ಸರಹದ್ದಿನಲ್ಲಿ ಅನಧಿಕೃತವಾಗಿರುವ ಕಟ್ಟಡಗಳನ್ನು ಖಾಯಂಗೊಳಿಸುವ ಬಗ್ಗೆ ನಿರ್ದೇಶನ ನೀಡಲಾಗಿದೆಯೇ ? ಹಾಗಿದ್ದಲ್ಲಿ ಇದು. ಯಾವಾಗ ಜಾರಿಗೆ ಬರುವುದು ?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):–

1. ಹೌದು. ತುಮಕೂರು ಪಟ್ಟಣಕ್ಕೆ ಒಳಚರಂಡಿ ಯೋಜನೆಗೆ ಭೂಸಮೀಕ್ಷೆಯನ್ನು ನಡೆಸಲು ರೂ.76.000–00ಕ್ಕೆ ಅಂದಾಜು ಪಟ್ಟಿಯನ್ನು ತಯಾರಿಸಿ ತುಮಕೂರು ನಗರಸಭೆಗೆ ದಿನಾಂಕ 12–1–1993ರಂದು ಮಂಡಳಿಗೆ ಹಣ ಠೇವಣಿ ಮಾಡುವಂತೆ ಕೋರಲಾಗಿದೆ.

2.ಕರ್ನಾಟಕ ನಗರ ಪ್ರದೇಶ ಅನಧಿಕೃತ ಕಟ್ಟಡಗಳ ಸಕ್ರಮಗೊಳಿಸುವ ಕಾಯ್ದೆ 1991ನ್ನು ದಿನಾಂಕ 1–8–92ರಿಂದ ಜಾರಿಗೆ ಬರುವಂತೆ ಪ್ರಕಟಿಸಲಾಗಿದೆ. ಮತ್ತು ಸದರಿ ಕಾಯ್ದೆಯನ್ವಯ ಕರಡು ನಿಯಮಾವಳಿಗಳನ್ನು ಪ್ರಕಟಿಸಲಾಗಿದೆ. ಹಾಗೂ ಆಕ್ಷೇಪಣೆಗಳನ್ನು ಕರೆಯಲಾಗಿದ್ದು ಸದರಿ ನಿಯಮಾವಳಿಗಳನ್ನು ಅಂತಿಮವಾಗಿ ಪ್ರಕಟಿಸುವ ಬಗ್ಗೆ ಸರ್ಕಾರದಲ್ಲಿ ಪರಿಶೀಲಿಸಲಾಗುತ್ತಿದೆ. ಸದರಿ ಕಾಯ್ದೆಯನ್ವಯ ಅಂತಿಮ ನಿಯಮಾವಳಿಗಳನ್ನು ಪ್ರಕಟಿಸಿದ ಮೇಲೆ ಕಾಯ್ದೆಯನ್ನು ಪೂರ್ಣವಾಗಿ ಜಾರಿಗೆ ತರಲಾಗುವುದು.

ತೀರ್ಥಹಳ್ಳಿ ತಾಲ್ಲೂಕು ಶಂಕರಹಳ್ಳಿ ಗ್ರಾಮದಲ್ಲಿ ಆಶ್ರಯ ಯೋಜನೆಯಡಿಯಲ್ಲಿ ಹಂಚಿರುವ ನಿವೇಶನಗಳ ಬಗ್ಗೆ

2028: ಶ್ರೀ ಬಿ. ಸ್ವಾಮಿರೆಡ್ಡಿ (ಹೊಸನಗರ):– ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಆ. ತೀರ್ಥಹಳ್ಳಿ ತಾಲ್ಲೂಕು ಶಂಕರಹಳ್ಳಿ ಗ್ರಾಮದಲ್ಲಿ 1991–92ರಲ್ಲಿ ಆಶ್ರಯ ಯೋಜನೆಯಡಿಯಲ್ಲಿ ನಿವೇಶನರಹಿತರಿಗೆ ಎಷ್ಟು ನಿವೇಶನವನ್ನು ನೀಡಲಾಗಿದೆ ? (ವಿವರ ನೀಡುವುದು);

ಆ.–ಫಲಾನುಭವಿಗಳನ್ನು ಯಾವ ಆಧಾರದ ಮೇರೆಗೆ ಗುರುತಿಸಲಾಗಿದೆ;

ಇ. ಫಲಾನುಭವಿಗಳನ್ನು ಗುರುತಿಸುವಾಗ ಭಾರಿ ಪ್ರಮಾಣದಲ್ಲಿ ಹಣದ ಅವ್ಯವಹಾರ ಕಂದಾಯ ಇಲಾಖೆಯ ಅಧಿಕಾರಿಗಳ ವತಿಯಿಂದ ನಡೆದಿರುವುದರ ಬಗ್ಗೆ ಸದರಿ ಗ್ರಾಮಸ್ಥರು ನೀಡಿದ